91(383) ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ(ಬೆಳ್ಳಾವಿ) ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಂದಾಯ ಇಲಾಖೆಯಲ್ಲಿ ಗ್ರಾಮ ಸಹಾಯಕರ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ?

ಆ) ಇವರುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಗರ್ಡೆ ಸೇರಿದ ನೌಕರರ ಸಂಖ್ಯೆ ಎಷ್ಟು?

ಇ) ಗ್ರಾಮ ಸಹಾಯಕರಿಗೆ ಮಾಸಿಕ ಭತ್ಯೆಯನ್ನು ಪ್ರಾರಂಭದಲ್ಲಿ ಎಷ್ಟು ನೀಡಲಾಗುತ್ತಿತ್ತು: ಮಾಸಿಕ ಭತ್ಯೆಯು ಹೆಚ್ಚಳವನ್ನು ಯಾವ ಯಾವ ವರ್ಷಗಳಲ್ಲಿ ಎಷ್ಟೆಷ್ಟು ಮಾಡಲಾಗಿದೆ?

ಈ) ಗ್ರಾಮ ಸಹಾಯಕರ ಸೇವೆಯನ್ನು 'ಡಿ' ದರ್ಜೆಯ ನೌಕರರಾಗಿ ಖಾಯಂಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) :

ಅ) 9665

ಆ) ಪರಿಶಿಷ್ಟ ಜಾತಿ – 3812

ಪರಿಶಿಷ್ಟ ಪಂಗಡ – 2224

ಇ) ದಿನಾಂಕ : 23.9.82ರಿಂದ ಮಾಸಿಕ ರೂ. 100/-ರಂತೆ

ದಿನಾಂದ : 1.4.2000ರಿಂದ ಮಾಸಿಕ ರೂ. 1000/- ರಂತೆ

ಈ) ಇಲ್ಲ

93(385) ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ (ಬೆಳ್ಳಾವಿ) ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಾರ್ಮಿಕ ಇಲಾಖೆಯ ವತಿಯಿಂದ ಬೀಡಿ ಕಾರ್ಮಿಕರಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ?

ಆ) ತುಮಕೂರು ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಡಿಯಲ್ಲಿ ಪರಿಣಾಮಕಾರಿಯಾಗಿ ಜಾರಿ ಮಾಡಿರುವ ಕಲ್ಯಾಣ ಕಾರ್ಯಕ್ರಮಗಳು ಯಾವುವು ;

ಇ) ಬೀಡಿ ಕಾರ್ಮಿಕರಿಗಾಗಿ ತುಮಕೂರು ಜಿಲ್ಲೆಯಲ್ಲಿ ಕಳೆದ ಮೂರು ಹಣಕಾಸು ವರ್ಷಗಳಲ್ಲಿ ಪರಿಣಾಮಕಾರಿಯಾಗಿ ಜಾರಿ ಮಾಡಿದ ಕಾರ್ಯಕ್ರಮಗಳ ಬಗ್ಗೆ ಮತ್ತು ಕಾರ್ಯಕ್ರಮವಾರು ವಿವರ ಮಾಡಿದ ಹಣದ ವಿವರಗಳನ್ನು ನೀಡುವುದು.

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) :

ಅ) ಕಾರ್ಮಿಕ ಇಲಾಖೆಯು ವತಿಯಿಂದ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ. ಕೇಂದ್ರ ಕಲ್ಯಾಣ ಆಯುಕ್ತರು ಯೋಜನೆಗಳನ್ನು ರೂಪಿಸುತ್ತಿದ್ದು, ಇದರಲ್ಲಿ ಮಸತಿ ಸೌಲಭ್ಯ ಕಾರ್ಯಕ್ರಮವನ್ನು ಜಾರಿಗೊಳಿಸುವಲ್ಲಿ ರಾಜ್ಯ ಸರ್ಕಾರ ಸಹಕಾರ ನೀಡುತ್ತಿದೆ.

ಆ) ಕೇಂದ್ರ ಕಲ್ಯಾಣ ಆಯುಕ್ತರ ಮುಖಾಂತರ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ.

1) ವೈದ್ಯಕೀಯ ಸೌಲಭ್ಯ
2) ಸಾಮಾಜಿಕ ಭದ್ರತಾ ಸೌಲಭ್ಯ
3) ಹೆರಿಗೆ ಸೌಲಭ್ಯ
4) ಶೈಕ್ಷಣಿಕ ಸೌಲಭ್ಯಗಳು
5) ವಸತಿ ಸೌಲಭ್ಯ.

ii) ಕಳೆದ 3 ವರ್ಷಗಳಲ್ಲಿ ತುಮಕೂರು ಜಿಲ್ಲೆಯಲ್ಲಿ ಜಾರಿಮಾಡಿದ ಮಾರ್ಯಕ್ರಮಗಳು ಮತ್ತು ಖರ್ಚುಗಳ ವಿವರ.

1) ಬೀಡಿ ವೈದ್ಯಕೀಯ ಸೌಲಭ್ಯ

ವರ್ಷ	ತುಮಕೂರು ಜಿಲ್ಲೆಯಲ್ಲಿ ಚಿಕಿತ್ಸೆ ಮಾಡಲಾದ ರೋಗಿಗಳ ಸಂಖ್ಯೆ
2002	37,348
2003	42,489
2004	27,843

ಆಗಸ್ಟ್‌ವರೆಗೆ

2) ಶೈಕ್ಷಣಿಕ ಸೌಲಭ್ಯ

ವರ್ಷ	ಫಲಾನುಭವಿಗಳ ಸಂಖ್ಯೆ	ಮೊತ್ತ
2001–02	10,278	53,07,800
2002–03	7,614	71,88,820
2003–04	12,828	1,21,73,780

3) ಸಾಮಾಜಿಕ ಭದ್ರತಾ ಯೋಜನೆ

ವರ್ಷ	ಫಲಾನುಭವಿಗಳ ಸಂಖ್ಯೆ
2002–03	4
2003–04	8
2004–05	3

4) ಹೆರಿಗೆ ಭತ್ಯೆ ಸೌಲಭ್ಯ

ವರ್ಷ	ಫಲಾನುಭವಿಗಳ ಸಂಖ್ಯೆ
2002–03	7
2003–04	6
2004–05	8